ಕಥೆ

# ‘ಸೆಲೆಬ್ರಿಟಿ ಶೋ’



**ಗುರುಪ್ರಸಾದ್ ಕಂಟಲಗೆರೆ**

ಕಲೆ: ವಿಶ್ವನಾಥ್ ಎ.ಎಸ್.

‘ಇದ್ರು ಸಾಕ್ತೋಳ್ನಾಕ್ಯಾಯ ಏನು ಹಿಂಸೆ ಕೊಡುತ್ತೆ ಈನನ್ನೆತ್ತಿದು’ ಎಂದು ಉಯ್ಯುವವನಂತೆಯೇ ಆಡುತ್ತ ಗೋಪಾಲಶೆಟ್ಟರ ಜವಳಿ ಅಂಗಡಿಯ ಮೆಟ್ಟಿಲುಗಳನ್ನು ಗಡ್ಡ ಹತ್ತುತ್ತಿದ್ದರೆ, ಅಪ್ಪ ಎಲ್ಲಿ ನಾಕು ತದುಕಿಬಿಡುತ್ತಾನೊ ಎಂಬ ಭಯದಲ್ಲೆ ಸಿದ್ದ ಎರಡು ಮೆಟ್ಟಿಲು ಹಿಂದಿಂದೆಯೇ ಗಡ್ಡನನ್ನು ಹಿಂಬಾಲಿಸಿದ್ದ. ಜವಳಿ ಅಂಗಡಿ ಸಾವ್ಕರನ್ನು ‘ಸ್ವಾಮಿ ನಮ್ಮುಡುಗುಂದು ಎಂಥದ ಕುಣಿಯ ಡ್ರೆಸ್ ಅಂತೆ ಕೊಡಿ ಸ್ವಾಮಿ’ ಎಂದ. ‘ಯಾವ ಸ್ಕೂಲ್‌ದು, ಯಾವ ಡ್ಯಾನ್ಸ್‌ದು’ ಎಂದು ಗೋಪಾಲ ಶೆಟ್ರು ಗಡ್ಡನ ಸೊಂಟದಸಮುಕ್ಕಿದ್ದ ಸಿದ್ದನನ್ನು ನೋಡುತ್ತ ಕೇಳಿದರು. ‘ಎಂಥದು ಹೇಳ್ಲ ಬಾಯಿ ಬಿಟ್ಟು, ಮಂತಲಾದ್ರೆ ಬೀದೆಲ್ಲ ಕೇಳಂಗೆ ಕಿರ್ಚುತೀಯ’ ಎಂದು ಗದರಿಸಿದಾಗ ‘ಗೌರ್ಮೆಂಟ್ ಸ್ಕೂಲ್ದು, ಟ್ವಿಂಕಲ್ ಟ್ವಿಂಕಲ್ ಲಿಟಲ್ ಸ್ಟಾರ್ ಅಪ್ಪು ಡ್ಯಾನ್ಸ್‌ದು’ ಅಂದ. ‘ಎದೆ ಸೀಳಿರೆ ನಾಕಕ್ಷರ ಇಲ್ಲ ಅಪ್ಪು ಡ್ಯಾನ್ಸ್ ಅಂತೆ ಅಪ್ಪು ಡ್ಯಾನ್ಸು’ ಅಂತ ಮಗನನ್ನ ದುರುಗುಟ್ಟಿ ‘ಆ ಮೇಡಮ್ಗು ಕೆಯ್ಯಕೆ ಕೇವಿಲ್ಲ, ಇವುಕ್ಕು ಬಾಳಿಲ್ಲ, ನಮ್ಗೊಳ್ಳೆ ರೇಜ್ಗೆ, ಕೊಡಿ ಸ್ವಾಮಿ ಅತ್ತಗೆ ಬಟ್ಟೆನ’ ಅಂದ ಗಡ್ಗ.

ಗೋಪಾಲ ಶೆಟ್ರು ‘ಸ್ಕೂಲು ಅಂದ್ಮೇಲೆ ಇವೆಲ್ಲ ಇರ್ಬೇಕು ಕಣಯ್ಯ, ಮಗನಿಗೆ ಮಾಡ್ದಲೆ ಇನ್ಯಾರಿಗೆ ಮಾಡ್ತಿಯ, ಈ ನೆಪದಲ್ಲಾರ ಹೊಸ ಬಟ್ಟೆ ಕೊಡಿಸ್ದಂಗೆ ಆಗುತ್ತೆ ತಗ’ ಅಂದ್ರು. ‘ಎಲ್ತರನ ಸಾವ್ಕಾರೆ ದುಡ್ಡ, ಆರ್ರೂರು ಮಾಡಿದಿರಂತೆ, ಬೆಳಿಗ್ಗೆದ್ದು ಊರು ಕಸ ಬಾಚರು ಅಂತ ನೀವೇನಾರ ಕಮ್ಮಿ ಮಾಡ್ಕೆಣಂಗಿದೀರ? ನಮ್ಮಂತರು ಮಕ್ಳು ಸಾಕದು ಎಷ್ಟು ಕಷ್ಟ ಗೊತ್ತ ಸಾವ್ಕರ್ರೆ’ ಅಂತ ತನ್ನ ಕರೆಗಡ್ಡ ಕೆರ್ಕಂಡ. ‘ಮಕ್ಳಿಗೆ ಬಟ್ಟೆ ಕೊಡುಸ್ಬೇಕು ಅಂತ ನೀನೇನಾರ ಕುಡಿಯದ ಬಿಟ್ಟಿದಿಯೇನಯ್ಯ, ದಿನ ಕುಡ್ದೇ ಕುಡಿತಿಯ ತಾನೆ’ ಎಂದು ಸಾವ್ಕರ್ರು ಮರು ಪ್ರಶ್ನೆ ಹಾಕಿ, ಗಡ್ಗನ ಮುಂದಿನ ಚೌಕಾಶಿಗಳಿಗೆ ತೆರೆ ಎಳೆದಿದ್ದರು.

ಗಡ್ಗನ ಮೂಲ ಹೆಸರು ಗದ್ದಿಗ ಅಂತ. ಅವನು ಬೆಳೆಯಲು ಶುರುವಾದಾಗಿನಿಂದ ಗಡ್ಡ ಬೋಳಿಸಿಯೇ ಇರದಿದ್ದ ಕಾರಣದಿಂದ ಗಡ್ಡಗ ಅಂತಾಗಿ, ಕೂಗುವವರ ಬಾಯಲ್ಲಿ ಗಡ್ಗ ಆಗಿ ನಿಂತಿದ್ದ. ಗಡ್ಗ ಬೆಳಗಿನ ಜಾವ ನಾಲ್ಕಕ್ಕೆ ಎದ್ದು ತನ್ನ ಕೇರಿಯ ಇತರರಂತೆ ತನಗೂ ಜನ್ಮದತ್ತವಾಗಿ ಬಂದಿದ್ವ, ಗೂಟದಲ್ಲಿ ನೇತಾಡುತ್ತಿದ್ದ ಖಾಕಿ ಪ್ಯಾಂಟು ಖಾಕಿ ಅಂಗಿನ ನೇತಾಕಿಕೊಂಡು ಭಾರವಾದ ಕರೆ ಬೂಟನ್ನ ಕಾಲಿಗೇರಿಸಿಕೊಂಡು ಲೇಟಾಯಿತೆಂದು